ಇ) ಸುಮಾರು 40 ರಿಂದ 50 ರಷ್ಟು

ಈ) ತೆರಿಗೆ ಬಾಕಿಯನ್ನು ದಂಡರಹಿತವಾಗಿ ಪಾವತಿ ಮಾಡಲು ಕಾಲಾವಕಾಶವನ್ನು ದಿ:28–02–2005 ರವರೆಗೂ ವಿಸ್ತರಿಸಲಾಗಿದೆ.

929(217) ಶ್ರೀ ಗಂಗಾಧರ್ ನಾಗೇಶ್ ಭಟ್(ಕಾರವಾರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಆಭರಣ ಕಳುವು ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇಂತಹ ಕಳುವಿನ ಹೆಚ್ಚಿನ ಪ್ರಕರಣಗಳಲ್ಲಿ ಪೊಲೀಸರು ಮುಗ್ಧ ಆಭರಣ ತಯಾರಕರನ್ನು ಸಹ ಆರೋಪಿತರನ್ನಾಗಿ ಮಾಡಿ ಠಾಣೆಗೆ ಎಳೆದು ತಂದು ಹಿಂಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಮುಗ್ಧ ಆಭರಣ ತಯಾರಕರ ಮೇಲೆ ಸುಳ್ಳು ಕೇಸು ಹಾಕದಿರಲು ಹಾಗೂ ಠಾಣೆಗೆ ತಂದು ಹಿಂಸಿಸದಿರಲು ಸರಕಾರ ಯಾವ ಕ್ರಮವನ್ನು ಕೈಗೊಳ್ಳಲಿದೆ :

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಆಭರಣ ಕಳುವು ಅಥವಾ ಸುಲಿಗೆ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದ್ದು 2002ರಲ್ಲಿ 36 ಪ್ರಕರಣಗಳು, 2003ರಲ್ಲಿ 22 ಪ್ರಕರಣಗಳು, 2004ರಲ್ಲಿ 43 ಪ್ರಕರಣಗಳು ದಾಖಲಾಗಿರುತ್ತದೆ.

ಆ) ಮುಗ್ಧ ಆಭರಣ ತಯಾರಕರನ್ನು ಆರೋಪಿತರನ್ನಾಗಿ ಮಾಡಿ ಠಾಣೆಗೆ ಎಳೆದು ತಂದು ಹಿಂಸಿಸಿದ ಬಗ್ಗೆ ವರದಿಯಾಗಿರುವುದಿಲ್ಲ. ಕಳುವಿನ ಪ್ರಕರಣದಲ್ಲಿ ಆರೋಪಿತರಾದ ಸುಬ್ರಾಯ ಗಣಪತಿ ಶೇಟ್ ಮತ್ತು ಉದಯ್ ಇವರನ್ನು ಠಾಣೆಗೆ ಕರೆಯಿಸಿ ವಿಚಾರಣೆಯನ್ನು ಮಾಡಲಾಗಿದೆ. ಈ ಬಗ್ಗೆ ದಾಖಲಾದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಪೊ.ಠಾಣೆ	ಮೊ.ಸಂ. ಮತ್ತು ಕಲಂ	ಆರೋಪಿತನ ಹೆಸರು	ತನಿಖಾ ಹಂತ
1	ಹೊನ್ನಾವರ ಪೊಲೀಸ್	255/04, ಕಲಂ 392 ಐಪಿಸಿ	ಸುಬ್ರಾಯ ಗಣಪತಿ ಶೇಟ್	ಯು.ಐ
2	ಕಾರವಾರ ಟೌನ್	102/04, ಕಲಂ 392 ಐಪಿಸಿ	ಸುಬ್ರಾಯ ಗಣಪತಿ ಶೇಟ್	ಯು.ಐ
3	ಕಾರವಾರ ಟೌನ್	106/04, ಕಲಂ 392 ಐಪಿಸಿ	ಸುಬ್ರಾಯ ಗಣಪತಿ ಶೇಟ್	ಯು.ಐ

4	ಕಾರವಾರ ಟೌನ್	136/04, ಕಲಂ 392 ಐಪಿಸಿ	ಸುಬ್ರಾಯ ಗಣಪತಿ ಶೇಟ್	ಯು.ಐ
5	ಅಂಕೋಲ	193/04 ಕಲಂ 392, 511 ಐಪಿಸಿ	ಉದಯ್	ಪಿ.ಟಿ

ಆಭರಣ ತಯಾರಕರಾದ ದಿವಾಕರ್ ಕಾಲು ರೇವಣಕರ್‌ರವರನ್ನು ಸಿದ್ದಾಪುರ ಪೊಲೀಸ್ ಠಾಣೆ ಮೊ. ಸಂ. 8/04; 457,380 ಐಪಿಸಿ ಪ್ರಕರಣಕ್ಕೆ ಸಂಬಂದಿಸಿದಂತೆ ಕರೆಯಿಸಿ ಪ್ರಶ್ನಿಸಲಾಗಿ ಈತನು ಮಧ್ಯವರ್ತಿಯಾಗಿರುತ್ತಾನೆ.

ಇ) ಮುಗ್ದ ಆಭರಣ ತಯಾರಕರನ್ನು ಆರೋಪಿತರನ್ನಾಗಿ ಮಾಡಿ ಠಾಣೆಗೆ ಎಳೆದು ತಂದು ಹಿಂಸಿಸಿದ ಪ್ರಕರಣಗಳು ಇದುವರೆವಿಗೂ ವರದಿಯಾಗಿರುವುದಿಲ್ಲ. ಇಂತಹ ಪ್ರಕರಣಗಳು ವರದಿಯಾದಲ್ಲಿ ಕೆಎಸ್‌ಪಿ(ಡಿ.ಪಿ) ರೂಲ್ಸ್ ರನ್ವಯ ಕ್ರಮ ಕೈಗೊಳ್ಳಲಾಗುವುದು.

930(844) ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೀನುಗಾರಿಕಾ ರಸ್ತೆಗಳೆಷ್ಟು?

ಆ) ಅತಿವೃಷ್ಟಿಯಿಂದ ಈ ರಸ್ತೆಗಳು ತೀರಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇವುಗಳ ದುರಸ್ತಿ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 20 ಮೀನುಗಾರಿಕಾ ರಸ್ತೆಗಳು ಇರುತ್ತವೆ. ಅಲ್ಲದೆ, ನಬಾರ್ಡ್ ಯೋಜನೆಯಡಿ 7 ಮೀನುಗಾರಿಕಾ ರಸ್ತೆಗಳನ್ನು ನಿರ್ಮಿಸಲಾಗಿದೆ.

ಆ) ಹೌದು.

ಮಳೆಗಾಲದಲ್ಲಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಅನುದಾನದ ಕೊರತೆಯಿಂದಾಗಿ ರಸ್ತೆಗಳನ್ನು ದುರಸ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಮೀನುಗಾರಿಕೆ ಕೊಂಡಿ ರಸ್ತೆಗಳ ದುರಸ್ತಿಗಾಗಿ ಹೆಚ್ಚುವರಿ ಅನುದಾನದ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

931(1499) ಶ್ರೀ ಕೆ. ಗೋಪಾಲ ಪೂಜಾರಿ(ಬೈಂದೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪಂಪಿಂಗ್ ಸ್ಟೇಷನ್‌ಗಳೆಷ್ಟು, (ವಿವರ ನೀಡುವುದು)

ಆ) ಜಲ ಮಂಡಳಿ ವ್ಯಾಪ್ತಿಯ ಬೆಂಗಳೂರು ನಗರದಲ್ಲಿ ಎಷ್ಟು ಪಂಪಿಂಗ್ ಸ್ಟೇಷನ್‌ಗಳಿವೆ.